ವಿಜಯ ಕರ್ನಾಟಕ

# ಜೈನ್ ಕಾಲೇಜು ಮತ್ತೊಂದು ದಾಖಲೆ

**ಬೆಂಗಳೂರು:** ರಕ್ಷಿತ್ ಯು ಶೆಟ್ಟಿ, ಡಿ.ಎಚ್. ಪೃಥ್ವಿಕ್, ಚಂದ್ರು ಪಿ ಮತ್ತು ಲಿಖಿತ್ ಎಸ್.ಪಿ ಅವರನ್ನು ಒಳಗೊಂಡ ಜೈನ್ ಕಾಲೇಜು ತಂಡ ಇಲ್ಲಿನಡೆಯುತ್ತಿರುವ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷರ ಈಜು ಚಾಂಪಿಯನ್ ಷಿಪ್‌ನ ಪುರುಷರ 400X100ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಕೂಟ ದಾಖಲೆ ನಿರ್ಮಿಸಿದೆ.

ಕನಕಪುರದ ಜೈನ್ ಇಂಟರ್‌ನ್ಯಾಷನಲ್ ರೆಸಿಡೆನ್ಸಿ ಶಾಲೆಯಲ್ಲಿ ಸೋಮವಾರ ನಡೆದ ಸ್ಪರ್ಧೆಯಲ್ಲಿ ಆತಿಥೇಯ ಜೈನ್ ಕಾಲೇಜು ತಂಡ 3:38.62 ಸೆ. ಮೊದಲ ಸ್ಥಾನಿಯಾಗಿ ಗುರಿ ತಲುಪಿ ಚಿನ್ನಕ್ಕೆ ಕೊರಳೊಡ್ಡಿತಲ್ಲದೆ 2016ರಲ್ಲಿ ಪಂಜಾಬ್ ವಿವಿ ನಿರ್ಮಿಸಿದ್ದ (3:42.12 ಸೆ.) ದಾಖಲೆಯನ್ನು ಅಳಿಸಿ ಹಾಕಿತು. ಪಂಜಾಬ್ ವಿವಿ ತಂಡ (3: 39.14 ಸೆ.) ತನ್ನ ದಾಖಲೆಯನ್ನು ಉತ್ತಮ ಪಡಿಸಿಕೊಂಡರೂ ಬೆಳ್ಳಿಗೆ ತೃಪ್ತಿಪಟ್ಟಿತು.